## ಮೂರನೇಯವರು...

ವರ್ಷಗಳ ಅನಂತರ ಗೆಳತಿಯರಾದ ಮಂಗಳಾ ಮತ್ತು ಶೋಭಾ ಭೇಟಿಯಾದರು. ಲೋಕಾರೂಢಿ ಮಾತನಾಡುತ್ತಾ ಶೋಭಾ ಕೇಳಿದಳು, 'ಮಗಂಗೆ ಮದ್ವೆ ಮಾಡಿ 4–5 ವರ್ಷ ಆಯ್ತು, ಏನೂ ಸಿಹಿಸುದ್ದಿ ಇಲ್ವಾ?' ಎಂದು. ಅದಕ್ಕೆ ಮುಖ ಊದಿಸಿಕೊಂಡ ಮಂಗಳಾ, 'ನಾವೆಲ್ಲಿ ಮದ್ವೆ ಮಾಡಿದ್ವಿ? ಅವನೇ ಮಾಡ್ಕಂಡು ಬಂದ. ಇರೋ ಒಬ್ಬ ಮಗನ ಖುಷಿ ಮುಖ್ಯ ಎಂದು ಸುಮ್ಮನಾದೆವು. ಇಷ್ಟು ವರ್ಷ ಆದ್ರೂ ಇನ್ನೂ ಮೊಮ್ಮಗು ಆಡಿಸೊ ಯೋಗ ಬಂದಿಲ್ಲ' ಎಂದರು. ಅದಕ್ಕೆ ಶೋಭಾ, 'ಓ, ಲವ್ ಮ್ಯಾರೇಜ್ ಅಲ್ವಾ? ತಮ್ಮಿಬ್ಬರ ನಡುವೆ ಮೂರನೇಯವರು ಬರಬಾರದು ಅಂತ ಆಣೆ–ಪ್ರಮಾಣ ಮಾಡ್ಕೊಂಡಿರಬೇಕು, ಪಾಪ' ಎಂದರು.

**ಮಲ್ಲಿಕಾರ್ಜುನ ಸುರಧೇನುಪುರ**





## ಉಪ್ಪಿಟ್ಟು

ಅಂದು ಬೆಳಗ್ಗೆ ತಿಂಡಿಗೆ ಮಸಾಲೆ ದೋಸೆ ಆಗಿರುತ್ತೆ ಎಂದು ಲಗುಬಗೆಯಿಂದ ಡೈನಿಂಗ್ ಟೇಬಲ್ಲಿಗೆ ಬಂದ ಗುಂಡ ಅಲ್ಲಿರುವ ಉಪ್ಪಿಟ್ಟಿನ ಪಾತ್ರೆ ನೋಡಿ, 'ಇವತ್ತೂ ಉಪ್ಪಿಟ್ಟಾ? ನಿನ್ನೆ ಯುಟ್ಯೂಬ್‌ನಲ್ಲಿ ಮೈಸೂರು ಮಸಾಲೆ ದೋಸೆ ವಿಡಿಯೊ ನೋಡ್ತಿದ್ದೆ ಅಲ್ವಾ?' ಅಂದ. ಅದಕ್ಕೆ ಹೆಂಡತಿ, 'ರೆಸಿಪಿ ನೋಡಿದ್ದೆಲ್ಲಾ ಮಾಡೋಕಾಗುತ್ತಾ?' ಎಂದು ಸಿಡುಕಿದಳು. 'ಮಾಡದಿದ್ರೆ ರೆಸಿಪಿ ನೋಡೋದ್ಯಾಕೆ?' ಎಂದ ಗುಂಡ. ಹೆಂಡತಿ, 'ನಿನ್ನೆ ನಾನು ಸ್ವರ್ಣ ಜ್ಯುವೆಲ್ಲರ್ಸ್‌ನಲ್ಲಿ ಹೊಸ ಬಳೆ ಪ್ಯಾಟರ್ನ್ ವಿಡಿಯೊ ಕೂಡ ನೋಡ್ತಿದ್ದೆ...' ಎಂದಳು. ಗುಂಡ, 'ನೀನು ಉಪ್ಪಿಟ್ಟು ಚೆನ್ನಾಗಿ ಮಾಡ್ತೀಯ, ಬೇಗ ಬಡಿಸು, ಆಫೀಸಿಗೆ ಹೊತ್ತಾಗುತ್ತೆ' ಎಂದ!

**ಪ.ನಾ. ಹಳ್ಳಿ ಹರೀಶ್‌ಕುಮಾರ್**

ಕಲೆ: ಗಣೇಶ ಆಚಾರ್ಯ